International Journal of Kannada Research
www.kannadajournal.com

ISSN: 2454–5813
IJKR 2022; 8(2): 40-43
© 2022 IJKR
www.kannadajournal.com
Received: 25-02-2022
Accepted: 27-03-2022

**ಡಾ. ಬಿ.ಕೆ. ಮಂಜುಳ**
ಕನ್ನಡ ವಿಭಾಗದ ಮುಖ್ಯಸ್ಥರು, ಶ್ರೀಭಗವಾನ ಮಹಾವೀರ್ ಜೈನ್ ಪ್ರಥಮ ದರ್ಜೆ ಕಾಲೇಜು, ಕೆ.ಜಿ.ಎಫ್ ಗೀತಾ ರಸ್ತೆ, ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್

Corresponding Author:
**ಡಾ. ಬಿ.ಕೆ. ಮಂಜುಳ**
ಕನ್ನಡ ವಿಭಾಗದ ಮುಖ್ಯಸ್ಥರು, ಶ್ರೀಭಗವಾನ ಮಹಾವೀರ್ ಜೈನ್ ಪ್ರಥಮ ದರ್ಜೆ ಕಾಲೇಜು, ಕೆ.ಜಿ.ಎಫ್ ಗೀತಾ ರಸ್ತೆ, ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್

# ಕೆ.ಆರ್.ಸಂಧ್ಯಾರೆಡ್ಡಿಯವರ ‘ಬೇರೊಂದು ದಾರಿ’ ಕಥಾ ಸಂಕಲನದ ಸ್ತ್ರೀಸಂವೇದನೆ

**ಡಾ. ಬಿ.ಕೆ. ಮಂಜುಳ**

**ಪೀಠಿಕೆ:** ಡಾ. ಕೆ.ಆರ್. ಸಂಧ್ಯಾರೆಡ್ಡಿ ಜಾನಪದ ಸಂಶೋಧಕರು, ಕಥೆ ಮತ್ತು ಕಾದಂಬರಿಕಾರ್ತಿಯು ಹೌದು. ಇವರ ಪ್ರಸಿದ್ಧ ಕಥಾ ಸಂಕಲನ ‘ಬೇರೊಂದು ದಾರಿ’ಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಸ್ತುತ ಸಂಕಲನದಲ್ಲಿ ನಗರ ಕೇಂದ್ರಿತ ವಿದ್ಯಾವಂತ ಹೆಣ್ಣಿನ ಸಂವೇದನೆಗಳು ಅಭಿವ್ಯಕ್ತವಾಗಿದೆ. ಕಥಾ ಸಂಕಲನದ ಶೀರ್ಷಿಕೆಯೇ ಬಹುತೇಕ ಕಥೆಗಳ ಆಯ್ಕೆಯನ್ನು ಪುರುಷ ಪ್ರಧಾನ ಸಮಾಜದ ಮೌಲ್ಯ, ಆದರ್ಶ, ಚೌಕಟ್ಟುಗಳನ್ನು ಮೌನವಾಗಿ ವಿರೋಧಿಸಿ ಬೇರೊಂದು ಹಾದಿಯ ಕನಸು ಕಾಣುವುದು ಕೆಲವೊಮ್ಮೆ ನನಸಾಗಿಸಿ ಕೊಳ್ಳುವ ಹಾದಿಯಲ್ಲಿನ ಪರಿ ಇಲ್ಲಿ ಅಭಿವ್ಯಕ್ತವಾಗಿರುವುದು ಕಂಡುಬರುತ್ತದೆ.

**ಸಂಶೋಧನಾ ವಿಧಾನ:** ಮುಂಜಾವಿಗೆ ಕಾದವಳು ಕಥಾಸಂಕಲನದ ಕಥೆಗಳನ್ನು ಆಧುನಿಕತೆಯ ವಿನ್ಯಾಸ, ಸಾಂಸ್ಕೃತಿಕ ವಿನ್ಯಾಸ, ಪ್ರತಿಭಟನೆಯ ವಿನ್ಯಾಸ ಮತ್ತು ಕಥನ ಶೈಲಿ ಎಂಬ ನಾಲ್ಕು ಆಯಾಮಗಳನ್ನು ಕುರಿತು ವಿಮರ್ಶಾತ್ಮಕವಾಗಿ ಮತ್ತು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

“ಉದ್ಯೋಗಸ್ಥ ಮಹಿಳೆಯ ಸ್ವಗತಗಳನ್ನು ಉದ್ಧರಿಸಲೆಳೆಸಿರುವ ಇಲ್ಲಿನ ಕಥೆಗಳ ನಡುವೆ ರಾವಣನಿಂದ ಅಪಹರಣಕ್ಕೊಳಗಾದ ಸೀತೆಯ ಸ್ವಗತವೂ ಇದೆ. “ಮೂರು ಹೊತ್ತು ಕರ್ತವ್ಯಗಳ ಸುಳಿಯಲ್ಲಿ ಸಿಕ್ಕಿಕೊಂಡ ರಾಮ, ಬಯಕೆಗಳಿಗೆ ಬಾಯಿ ಕೊಡದ ಲಕ್ಷ್ಮಣ, ಮನಸಿಗೆ ಮೂರು ಕಾಸಿನ ಬೆಲೆಯನ್ನೂ ಕೊಡದ ಈ ರಾವಣ, ಇವರೆಲ್ಲರಿಂದ ನನಗೆ ಮುಕ್ತಿ ಸಿಗಲಿ ಇದೆಲ್ಲಕ್ಕಿಂತ ನನಗೆ ಸಾವು ಬರಲಿ” ಎಂದು ಗೋಳಾಡುವ ಸೀತೆಯ ಸ್ವಗತದಲ್ಲಿ ಆಧುನಿಕ ಸ್ತ್ರೀಸಂವೇದನೆಯ ಆಶಯಗಳೇ ಇಲ್ಲಿನ ಎಲ್ಲಾ ಕಥೆಗಳಲ್ಲಿ ಹಾಸು ಹೊಕ್ಕಾಗಿವೆ. ಸೀತೆಯನ್ನು ಅರ್ಥೈಸುವಲ್ಲಿ ಡಾ. ಪೋಲಂಕಿ ತೋರಿದ ವಿಶ್ಲೇಷಣೆಗಿಂತ ಭಿನ್ನವಾಗಿ ಸ್ತ್ರೀ ಹೃದಯದದಿಂದ ಕಾಣುವ ಈ ನೋಟ ಭಾರವೆನ್ನಿಸುವ ವೈಚಾರಿಕತೆಯಿಲ್ಲದೇ ಆತ್ಮೀಯವೆನಿಸುತ್ತದೆ.”[೧]

ಸ್ತ್ರೀಯರು ಬರೆಯುವ ಕಥೆಗಳು ಆಧುನಿಕ ವಿದ್ಯಾಭ್ಯಾಸದಿಂದ ಸಮಾನತೆ, ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ಸ್ವಾವಲಂಬನೆ ಹಾಗು ಮಹಿಳಾ ಪರವಾದ ತನ್ನದೇ ಆದೇ ಹೊಸ ಆಲೋಚನೆ, ಚಿಂತನೆಗಳಿಗೆ ತನ್ನ ತಾನು ಒಡ್ಡಿಕೊಳ್ಳುವುದನ್ನು ಇಲ್ಲಿ ಕಾಣುತ್ತೇವೆ. ತನ್ನ ಸಮಸ್ಯೆ, ಕಷ್ಟಗಳಿಗೆ ತಕ್ಷಣದ ತಿರ್ಮಾನಗಳನ್ನು ತೆಗೆದುಕೊಳ್ಳದೇ, ಪಲಾಯನವಾದಿಯಾಗದೇ, ಸರಿ–ತಪ್ಪುಗಳ ಆತ್ಮಾವಲೋಕನ ಮಾಡಿಕೊಳ್ಳುವುದನ್ನು ಮಹಿಳಾ ಸಂಕಥನವೆನ್ನಬಹುದು. “ಸಂಕಥನ ಎಂದರೆ ವಿಶ್ಲೇಷಣೆ ಎಂದರ್ಥ. ಕನ್ನಡ ಸಣ್ಣ ಕಥೆಗಳ ವಿಶ್ಲೇಷಣೆ ಇಲ್ಲಿಯ ಲೇಖನಗಳ ವಸ್ತು. ಇಂದು ಇಂಗ್ಲಿಷಿನ Discourse ಎ0ಬ ಪದಕ್ಕೆ ಪರ್ಯಾಯವಾಗಿ ಕನ್ನಡದಲ್ಲಿ ಸಂಕಥನ ಎಂಬ ಪದವನ್ನು ಬಳಸಲಾಗುತ್ತಿದೆ. ಆರಂಭದಲ್ಲಿ ಈ ಇಂಗ್ಲಿಷ್ ಪದಕ್ಕೆ ಕನ್ನಡದಲ್ಲಿ ಸಂವಾದ ಎಂಬ ಅರ್ಥದಲ್ಲಿ ಬಳಸಲಾಗುತ್ತಿತ್ತು. ಇಂದು ಈ Discourse ಪದ ಬೇರೆ ಬೇರೆ ಉದ್ದೇಶಗಳಿಗೆ ಬೇರೆ ಬೇರೆ ಅರ್ಥಗಳಲ್ಲಿ ಬಳಕೆಯಾಗುತ್ತಿದೆ. ಈಗ ಇದು ಬರೀ ಸಾಹಿತ್ಯಕ ಸಂದರ್ಭದಲ್ಲಿ ಮಾತ್ರ ಬಳಕೆಯಾಗುತ್ತಿಲ್ಲ. ಈಗ ಇದೊಂದು ಸಾಹಿತ್ಯಕ, ಸಾಂಸ್ಕೃತಿಕ, ರಾಜಕೀಯ ಆಯಾಮವುಳ್ಳ ಅರ್ಥದಲ್ಲಿಯೂ ಬಳಕೆಯಾತ್ತಿದೆ.”[2] ಹೀಗೆ ವಿಶಾಲವಾದ ವ್ಯಾಪ್ತಿಯಲ್ಲಿ ಸಂಕಥನ ಪದವನ್ನು ಬಳಸಲಾಗುತ್ತಿದೆ.

**ಆಧುನಿಕ ಬದುಕಿನ ವಿಪರ್ಯಾಸಗಳ ಚಿತ್ರಣ**

ಇಲ್ಲಿನ ಎಲ್ಲ ಕಥೆಗಳಲ್ಲಿ ಹೆಣ್ಣು ವಿದ್ಯಾವಂತ ಪಾತ್ರಗಳೇ ಆಗಿದ್ದಾರೆ. ಕೆಲವರು ಉದ್ಯೋಗನಿರತರಾಗಿದ್ದರೆ, ಇನ್ನೂ ಕೆಲವು ಗೃಹಿಣಿಯರಾಗಿ ಚಿತ್ರಿತಗೊಂಡಿದ್ದಾರೆ. ಪದವಿ, ಸ್ನಾತಕೋತ್ತರ ಪದವಿ, ಸಂಶೋಧನೆಗಳಲ್ಲಿ ನಿರತರಾದ ಇಲ್ಲಿನ ಪಾತ್ರಗಳು ಒಂದೆಡೆಯಾದರೆ ಅವಿದ್ಯಾವಂತ ಮಾನವೀಯ ಪಾತ್ರಗಳು ಕೆಲವು ಕಥೆಗಳಲ್ಲಿ ಚಿತ್ರಣಗೊಂಡಿವೆ. ಇನ್ನೂ ಕೆಲವು ಒಬ್ಬ ಬರೆಹಗಾತಿ9ಯಾಗಿ, ಆದರ ಅನುಭವವನ್ನು ಕಥೆಗಳಲ್ಲಿ ಅಭಿವ್ಯಕ್ತವ್ಯಕ್ತಿಸುವ ಪರಿಯನ್ನು ಇಲ್ಲಿ ಗಮನಿಸಬಹುದು.

"ಹೀಗೆ ಒಂದು ಪ್ರೇಮದ ಕಥೆ" ನಾಯಕಿ ಉದ್ಯೋಗಸ್ಥೆ. "ಕಥೆಯ ಕಥೆ"ಯ ನಾಯಕಿ ಬರೆಹಗಾರ್ತಿ, "ಆಕಸ್ಮಿಕ" ಸ್ಮಿತಾ, "ಅಮ್ಮನಿಗೊಂದು ಸೀರೆ"ಯಲ್ಲಿ ಉಮಾ, "ಹೀಗೂ ಆಗುವುದುಂಟು" ಕಥೆಯ ಶಾಲಿನಿ, "ಸುಳಿ ಕಥೆ"ಯ ನಾಯಕಿ "ಒಂದು ಆತ್ಮ ಕಥೆಯ" ನಾಯಕಿ ಮುಂತಾದವೆಲ್ಲ ವಿದ್ಯಾವಂತ ಪಾತ್ರಗಳೇ ಆಗಿವೆ. "ಬೇರೊಂದು ದಾರಿಯ" ವಿಜಿ ಸಂಸಾರಿಕ ಬಂಧನವನ್ನು ತ್ಯಜಿಸಿ ಮತ್ತೆ ಸಂಶೋಧನೆ0ಯಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತಿರುವಳು. ಮತ್ತು ಕಥಾ ನಾಯಕಿ ಸಂಸಾರಿಕ ಬದುಕಿನಲ್ಲಿದ್ದೂ ಬರವಣಿಗೆಯಲ್ಲಿ ತನ್ನ ತೊಡಗಿಸಿಕೊಂಡಿದ್ದಾಳೆ. "ಹೀಗೆ ಹತ್ತು ವರ್ಷ ಕಳೆದಿರಬಹುದು. ಮೈಸೂರಿನಲ್ಲಿ ನಡೆಯಲಿರುವ ದ್ರಾವಿಡ ಭಾಷಾ ವಿಚಾರ ಸಂಕಿರಣದಲ್ಲಿ ಲೇಖನ ಮಂಡಿಸುವಂತೆ ನನಗೆ ಆಹ್ವಾನ ಬಂದಾಗ ಕೂಡಲೇ ಒಪ್ಪಿಕೊಂಡೆ. ಅತ್ಯಂತ ಶ್ರದ್ಧೆಯಿಂದ ರಾತ್ರಿ 10 ರಿಂದ 12ರವರೆಗೆ ಬೆಳಿಗ್ಗೆ 5 ರಿಂದ 7ರವರೆಗೆ ಕೂತು ಲೇಖನ ಸಿದ್ಧಪಡಿಸಿದೆ. ಎರಡು ದಿನದ ಮಟ್ಟಿಗಾದರೂ ಯಾಂತ್ರಿಕ ಜೀವನದಿಂದ ಬಿಡುಗಡೆ ಅನುಭವಿಸುವ ಖುಷಿಯಿಂದ ಮನಸ್ಸು ಪ್ರಫುಲ್ಲಗೊಂಡಿತ್ತು."[3] ಹೀಗೆ ಬರೆಯುವುದರಲ್ಲಿ ಸಂತೋಷ ಪಡೆಯುವುದನ್ನು ಹಾಗೂ ನಾಯಕಿಯ ಗೆಳತಿ ವಿಜಿ ಮದುವೆಯಾಗಿ ಗಂಡನನ್ನು ತ್ಯಜಿಸಿ, ಮಗುವನ್ನು ತಾಯಿ ಬಳಿ ಬಿಟ್ಟು ಮತ್ತೆ ಸಂಶೋಧನೆ ಮಾಡುತ್ತಿರುವುದು ತಿಳಿಯುತ್ತದೆ. "ವಿಜಿಗೆ ಮದುವೆ ಆಗಿದ್ದು, ಒಂದು ಮಗು ಆಗಿರುವುದು, ಅವಳ ಗಂಡ ಬಿಸಿನೆಸ್ ಮಾಡುತ್ತಿರುವುದು ಎಲ್ಲವೂ ನನಗೆ ಈ ಮೊದಲೇ ತಿಳಿದಿತ್ತು. ಇಂಥದ್ದರಲ್ಲಿ ಇವಳು ಕ್ಯಾಂಪಸ್ಸಿಗೆ ಬಂದದ್ದು ಹೇಗೆ ಎಂಬ ಕುತೂಹಲವನ್ನು ಅದುಮಿಡುತ್ತಾ 'ನೀನೇನ್ಮಾಡ್ತಾ ಇದ್ದೀಯಾ ಇಲ್ಲಿ' ಎಂದು ಸರಳವಾಗಿ ಕೇಳಿದೆ. 'ಓ ನಾನು ರಿಸರ್ಚ್‌ಗೆ ಜಾಯಿನ್ ಆಗಿದ್ದು ನಿಂಗೆ ಗೊತ್ತಿಲ್ವಾ? ಇಲ್ವ. ಆಗಲೇ ಮೂರು ವರ್ಷ ಆಯ್ತು. ಇನ್ನೊಂದು ವರ್ಷ ಬಾಕಿ ಇದೆ' ಎಂದು ತೀರಾ ಮಾಮೂಲು ದನಿಯಲ್ಲಿ ನಿರೂಪಿಸಿದಳು."[4] ಹೀಗೆ ಇಲ್ಲಿ ಸಂಸಾರಿಕ ಬಹುಕಿಗಿಂತ ವಿದ್ಯೆ ಸಂಶೋಧನೆಗೆ ಒತ್ತು ಕೊಟ್ಟಿರುವುದನ್ನು ಗಮನಿಸಬಹುದು.

"ಕಥೆಯ ಕಥೆ"ಯಲ್ಲಿ ಕುತೂಹಲದಿಂದ ಓದಿಸಿಕೊಂಡು ಹೋಗುವ ಗುಣವಿದೆ. ಕಥೆಯಲ್ಲಿನ "ಭಗ್ನ ಪ್ರೇಮದ ಕಥೆ"ಗೆ ಅನೇಕರ ಸ್ಪಂದನೆಯ ಪತ್ರಗಳು ಬರುತ್ತವೆ. ಹಾಗು ಕಥೆಗಾರ್ತಿಯ ಐದು ವರ್ಷದ ಮಗಳು ಕುಸುಮ ನೀನು ಬರೆದ ಕಥೆ ಹೇಳಮ್ಮ ಎಂದು ಕೇಳಿದಾಗ ತಾಯಿ ತಬ್ಬಿಬ್ಬು ಆಗುತ್ತಾಳೆ. ಕಥೆಯನ್ನು ಮೊಟಕುಗೊಳಿಸಿ ಜೊತೆಗೆ ಜನಪದ ಕಥೆಗಳೆರಡನ್ನು ಹೇಳಿ ಸಂತೈಸುತ್ತಾಳೆ. ಕಥೆಯನ್ನು ಮೆಚ್ಚಿ ಬರೆದ ಪತ್ರಗಳಲ್ಲಿ ಎಸ್.ಜಿ. ಸಂತೋಷ್ ಅನ್ನುವವರು ಬರೆದ ಪತ್ರಕ್ಕೆ ಮರು ಉತ್ತರ ಬರೆದ ನಂತರ ಪತ್ರ ವ್ಯವಹಾರ ಏರ್ಪಪಡುತ್ತದೆ. ಕಥೆಗಾರ್ತಿ ಓದುಗ ಅಭಿಮಾನಿ ಎಸ್.ಜಿ. ಸಂತೋಷ್ ಮಧ್ಯದ ಪತ್ರ ವ್ಯವಹಾರದಿಂದ ಪರಸ್ಪರರಲ್ಲಿ ಸ್ನೇಹ, ಆಸಕ್ತಿ, ಲವಲವಿಕೆ, ಆತ್ಮೀಯತೆಗಳು ವ್ಯಕ್ತವಾಗುತ್ತದೆ. ಇದರಿಂದ ಯಾಂತ್ರಿಕವಾದ ನೀರಸ ಬದುಕಿಗೆ ಹೊಸತನ ಬಂದಂತಾಗುತ್ತದೆ. ಹೀಗೆ ಪತ್ರ ವ್ಯವಹಾರ ನಡೆಯುತ್ತಿರುವಾಗ ಕಥೆಗಾರ್ತಿಗೆ ಕೆ.ಜಿ.ಎಫ್‌ಗೆ ಲೇಖಕಿಯರ ಸಮಾವೇಶಕ್ಕೆ ಹೋಗುವ ಸಂದರ್ಭ ಏರ್ಪಡುತ್ತದೆ. ಸಂತೋಷ್‌ರನ್ನು ಭೇಟಿ ಆಗಬಹುದೆಂಬ ಬಯಕೆಯು ಒಂದೆಡೆ ಇರುತ್ತದೆ. ಸಂತೋಷ್ ವ್ಯಕ್ತಿ ಬಗೆಗಿನ ಬೇರೆ ಬೇರೆ ಕಲ್ಪನೆಗಳೊಂದಿಗೆ ಸಾಹಿತ್ಯದ ಕಾರ್ಯಕ್ರಮಕ್ಕೆ ಬರಬಹುದೆಂಬ ಕೂತೂಹಲದಿಂದ ಸಮಾವೇಶಕ್ಕೆ ಬರುತ್ತಾರೆ. ಕಾರ್ಯಕ್ರಮದ ಕೊನೆಗೆ ಅಭಿಮಾನಿಗಳು ಆಟೋಗ್ರಾಫ್‌ಗಳನ್ನು ಪಡೆಯುತ್ತಿದಂತೆ ಕ್ರಮೇಣ, ಸಂತೋಷ್ ಬಗೆಗೆ ಇದ್ದ ಆಸಕ್ತಿ ಕಡಿಮೆಯಾಗತೊಡಗುತ್ತದೆ. ಕೊನೆಗೆ ಇಬ್ಬರು ಕಾಲೇಜು ಅಧ್ಯಾಪಿಕೆಯರು ಹತ್ತಿರ ಬಂದು ನಗುತ್ತಾ ನಮಸ್ಕರಿಸಿ ಒಬ್ಬರು ಪರಿಚಯಿಸಿಕೊಳ್ಳುತ್ತಾ ತಾನೆ ಸಂತೋಷ್ ಎಂಬುದನ್ನು ಹೇಳಿದಾಗ ಇಲ್ಲಿಯ ತನಕ ಇದ್ದ ಕುತೂಹಲ ಖಾಲಿಯಾಗುತ್ತದೆ. ಆಗ ಉತ್ತರ ಭಾರತದ ಅನೇಕ ಹೆಣ್ಣುಗಳ ಹೆಸರು ಸಂತೋಷ್ ಎಂದಿರುವುದು ನೆನಪಿಗೆ ಬರುತ್ತದೆ. ಸಂತೋಷ್ ಕಥೆಗಾರ್ತಿಯನ್ನು ಸಂತೋಷದಿಂದಲೇ ಮನೆಗೆ ಆಹ್ವಾನಿಸುತ್ತಾಳೆ. ಹೀಗೆ ಕಥೆಯಲ್ಲಿ ಕುತೂಹಲ, ಯಾಂತ್ರಿಕ ಬದುಕು ಜೀವಂತವಾಗಿರಲು ಹಾಗೂ ಕಥಾ ಸೃಷ್ಟಿಗೂ ಜೀವನ ಪ್ರೀತಿ ಮುಖ್ಯ ಎಂಬುದು ಈ ಕಥೆಯಿಂದ ತಿಳಿದು ಬರುತ್ತದೆ. "ಒಂದು ದಿನಚರಿ"ಯಲ್ಲಿ ಸಹ ಕವನ ಬರೆಯುವಿಕೆಯನ್ನು ಕುರಿತ ಪ್ರಸ್ತಾಪ ಬರುತ್ತದೆ.

ಆಧುನಿಕ ಬದುಕು ತಂದೊಡ್ಡಿರುವ ವಿಪರ್ಯಾಸಗಳನ್ನು ಕುರಿತು ಸಂಧ್ಯಾರೆಡ್ಡಿಯವರ ಕಥೆಗಳಲ್ಲಿ ಹೆಣ್ಣು ಪಾತ್ರಗಳ ಸ್ವೇಚ್ಛಾಚಾರ ಪುರುಷ ಪಾತ್ರಗಳಿಗಿಂತ ಹೆಚ್ಚಾಗಿ ಮೂಡಿಬಂದಿದೆ. "ಹೀಗೆ ಒಂದು ಪ್ರೇಮದ ಕಥೆ"ಯಲ್ಲಿ "ನಾವು ಎಲ್ಲಿದ್ದೇವೆ, ಏನು ಮಾಡುತ್ತಿದ್ದೇವೆ, ಎಲ್ಲಿಗೆ ಮುಟ್ಟುತ್ತೇವೆ ಎಂಬ ಬಗ್ಗೆ ಅವನು ಖಂಡಿತ ಯೋಚಿಸಿರಲಾರ. ಹೀಗಿರುವುದರಿಂದಲೇ ಹುಡುಗರು ಜೀವನದಲ್ಲಿ ಹೆಚ್ಚು ಸುಖಿಗಳಾಗಿರುವರೇನೋ! ಹುಡುಗಿಯರು ಹೀಗಿರುವುದಿಲ್ಲವಾದರೂ ನಾನು ಮಾತ್ರ ಈ ವಿಷಯದಲ್ಲಿ ಜಾಣೆಯೇ ಅಂದುಕೊಳ್ಳುತ್ತೇನೆ. ನಾನು ಹೀರುತ್ತಿದ್ದ ಜಿನ್, ಮೆಲ್ಲುತ್ತಿದ್ದ ಚಿಲಿ ಚಿಕನ್ ನಡುವೆ, ಅಕ್ಕಪಕ್ಕದಲ್ಲಿ ನಮ್ಮ ತೊಡೆ ಸೋಂಕಿ ಉಂಟಾದ ಬೆಚ್ಚಗಿನ ಹಿತದ ನಡುವೆ ನನ್ನ ಭವಿಷ್ಯದ ಚಿಂತೆ ಆಗ್ಗಾಗ್ಗೆ ಸುಳಿದರೂ ಆ ಚಿಂತೆಯನ್ನು ಪಕ್ಕದಲ್ಲಿ, ಎದುರಲ್ಲಿ, ತಲೆಯಲ್ಲಿ ಇಟ್ಟುಕೊಂಡೇ ಪ್ರೀತಿಯ, ಪ್ರೇಮದ ಹುಡುಗನ ಸಖ್ಯದ ಸುಖವನ್ನು ಪೂರಾ ಪೂರಾ ಅನುಭವಿಸುತ್ತಿದ್ದೆ."[5] ಹೀಗೆ ಆಧುನಿಕ ಹೆಣ್ಣು ಉದ್ದೇಶ ಪೂರ್ವಕವಾಗಿ ಸ್ವೇಚ್ಛೆಯ ಬದುಕನ್ನು ಆಯ್ಕೆಮಾಡಿಕೊಳ್ಳುತ್ತಿರುವುದು ತಿಳಿದು ಬರುತ್ತದೆ.

**ಪ್ರತಿಭಟನೆಯ ವಿನ್ಯಾಸ**

ಮನುಷ್ಯ ಸಂಘ ಜೀವಿ. ಹಾಗಾಗಿ ಹುಟ್ಟಿನಿಂದ ಸಾವಿನ ತನಕ ವಿಧ ವಿಧವಾದ ಮನಸು, ಮನುಷ್ಯರೊಂದಿಗೆ ಒಂದಿಲ್ಲ ಒಂದು ಕಾರಣಕ್ಕೆ ವ್ಯವಹರಿಸಲೇ ಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ತನ್ನ ಮನಸಿಗೆ ವ್ಯತಿರಿಕ್ತ ವರ್ತನೆ ಕಂಡುಬಂದಾಗ ಸಹಜವಾಗಿ ಅನೇಕರು ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾರೆ. ಸಂಧ್ಯಾರೆಡ್ಡಿಯವರ ಕಥೆಗಳಲ್ಲಿ ನೇರವಾದ ಆಕ್ರೋಶದ ಪ್ರತಿಭಟನೆ, ಆವೇಶಗಳಿಗಿಂತ ತೀರಾ ಕಡಿಮೆಯಾದ ಸೂಕ್ಷ್ಮ ಪ್ರತಿಭಟನೆ ವ್ಯಕ್ತವಾಗಿದೆ. ಪ್ರತಿಭಟನೆಗಿಂತ ಆದರೆ ಇಲ್ಲಿನ ವಿದ್ಯಾವಂತ ಪಾತ್ರಗಳು ಅಸಹಾಯಕ ಸನ್ನಿವೇಶಗಳು ಎದುರಾದಾಗ ವಿರೋಧವನ್ನು ವ್ಯಕ್ತಪಡಿಸುವುದಕ್ಕಿಂತ ಮೌನವಹಿಸುತ್ತವೆ. ಕೆಲವೊಮ್ಮೆ ಮಾನಸಿಕ ಸಂಕಥನಕ್ಕೆ ಒಳಗಾಗಿ ಬಿಡುಗಡೆಯತ್ತ ಹಂಬಲಿಸುತ್ತವೆ. "ರಮೇಶನ ಗೊರಕೆ ನನ್ನ ನಿದ್ದೆಯನ್ನು ಹೊಡೆದೋಡಿಸುವಷ್ಟು ಜೋರಾಗುತ್ತು. ರಾಜಶೇಖರನ ನೆನಪಾಯಿತು. ಅವನು ಈಗ ಏನು ಮಾಡುತ್ತಿರಬಹುದು ಎಂದು ಯೋಚಿಸಿದೆ. ಯಾವಾಗಲೊ ನಿದ್ದೆ ಆವರಿಸಿತು. ಬೆಳಗಿನ ಜಾವದ

ಕನಸಿನ ತುಂಬಾ ರಾಜಶೇಖರ ಹರಡಿಕೊಳ್ಳುತ್ತಿದ್ದಾಗ... ಸಕ್ಕರೆ ನಿದ್ದೆಯ ತಲೆಯ ಮೇಲೆ ಸುತ್ತಿಗೆಯಿಂದ ಬಡಿದಂತೆ ಅಲಾರಂ ಬಾರಿಸತೊಡಗಿತು...."[6] ಹೀಗೆ ಇಲ್ಲಿನ ಕಥಾ ನಾಯಕಿ ಮನೆಯ ಒಳಗೆ ಹೊರಗೆ ದುಡಿಯುತ್ತಾ ಒದ್ದಾಡುವವಳು. ಗಂಡನ ಅಸಹಕಾರ, ಒತ್ತಡ, ದುಗುಡಗಳಲ್ಲಿ ಹಿಂಸೆ0ಯನ್ನು ಅನುಭವಿಸುತ್ತಿರುವವಳು. ಒಮ್ಮೆ ಗಂಡನ ಸ್ನೇಹಿತ ರಾಜಶೇಖರ ಮನೆಗೆ ಬರುತ್ತಾನೆ. ಆತ ತನ್ನ ಹೆಂಡತಿ ಬಗೆಗೆ ದೂರುಗಳನ್ನು ಹೇಳುತ್ತಾನೆ. ಆಗ ರಮೇಶ ಹೆಂಡತಿಯ ಬಗೆಗೆ ಮಾತನಾಡದೆ ಮೌನವಹಿಸುತ್ತಾನೆ. ಅಂದಿನ ರಾತ್ರಿ ನಾಯಕಿ ಪಕ್ಕದಲ್ಲಿರುವ ರಮೇಶನನ್ನು ಬಿಟ್ಟು ರಾಜಶೇಖರನ ಕನಸು ಕಾಣುತ್ತಾಳೆ. ಇದು ಮೌನ ಪ್ರತಿಭಟನೆ. "ಸ್ವಗತ" ಕತೆಯಲ್ಲಿ ಪಿತೃ ಪ್ರಧಾನ ಸಮಾಜದ ಹೆಣ್ಣು ತನ್ನ ವಿರೋಧವನ್ನು ಹೀಗೆ ವ್ಯಕ್ತಪಡಿಸಿದ್ದಾಳೆ. "ನನಗೆ ಏನಾಯಿತು ಎಂದು ತಿಳಿಯುವಷ್ಟರಲ್ಲಿ ಅವನು ನನ್ನನ್ನು ಅಪಹರಿಸಿಬಿಟ್ಟಿದ್ದ. ಅವನ ಕಾಮ ತುಂಬಿದ್ದ ಕಣ್ಣು, ಅವನ ವಿಜಯೋತ್ಸಾಹದ ಕೇಕೆ, ಅಟ್ಟಹಾಸ, ಕಣ್ಣು ಕುಕ್ಕುವ ಅವನ ರತ್ನಾಭರಣ ಎಲ್ಲವೂ ನನ್ನಲ್ಲಿ ಅತೀವ ಜಿಗುಪ್ಸೆ ಹುಟ್ಟಿಸಿದವು. ಇದೆಂಥ ಘೋರ ಅನ್ಯಾಯ, ಎಂತಹ ದುರ್ಬಲ ಪರಿಸ್ಥಿತಿಯಲ್ಲಿ ಇವನು ನನ್ನನ್ನು ಅಪಹರಿಸಿದ್ದಾನೆ ಎಂದು ಮೈಯಲ್ಲ ಉರಿಯಿತು. ಮೊದಲೇ ಸಂತಾಪದಿಂದ ಕುದಿಯುತ್ತಿದ್ದ ನಾನು ಈಗ ನನ್ನ ಅಸಹಾಯಕತೆ ವೇದನೆಗಳಿಂದ ಮತ್ತಷ್ಟು ಖಿನ್ನಳಾದೆ. ಹದ್ದಿನಂತೆ ನನ್ನ ಮೇಲೆರಗಿದ ರಾವಣನನ್ನು ಕಚ್ಚಿ ಪರಚಿ ದಾಂಧಲೆ ಮಾಡಿದೆ. ಬಾಯಿಗೆ ಬಂದಂತೆ ಕೂಗಾಡಿದೆ, ಚೀರಾಡಿದೆ. ಆ ಕ್ಷಣದಲ್ಲಿ ಇಡೀ ಗಂಡುಜಾತಿಯ ಮೇಲೆ ಸಿಟ್ಟು ಬಂತು."[7] ಹೀಗೆ ಸಿಟ್ಟನ್ನು ವ್ಯಕ್ತಪಡಿಸುತ್ತಾ "ಮೂರು ಹೊತ್ತು ಕರ್ತವ್ಯಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡು ರಾಮ, ಬಯಕೆಗಳಿಗೆ ಬಾಯಿ ಕೊಡದ ಲಕ್ಷ್ಮಣ, ಮನಸಿಗೆ ಮೂರು ಕಾಸಿನ ಬೆಲೆಯನ್ನೂ ಕೊಡದ ಈ ರಾವಣ ಇವರೆಲ್ಲರಿಂದ ನನಗೆ ಮುಕ್ತಿ ಸಿಗಲಿ, ಇದೆಲ್ಲಕ್ಕಿಂತ ನನಗೆ ಸಾವು ಬರಲಿ" ಎಂದು ಗೋಳಾಡುತ್ತಾ ಭಗವಂತನನ್ನು ಪ್ರಾರ್ಥಿಸತೊಡಸಿದೆ.."[8] ಹೀಗೆ ತನಗೆ ಮುಕ್ತಿ ಅಥವ ಬಿಡುಗಡೆ ಸಿಗಲಿ, ಅದು ಸಾಧ್ಯವಾಗದಿದ್ದರೆ ತನಗೆ ಸಾವಾದರೂ ಬರಲಿ ಎಂದು ಪ್ರಾರ್ಥಿಸುವಲ್ಲಿ ಆಧುನಿಕ ಹೆಣ್ಣಿನ ಅಸಹಾಯಕತೆಯ ನೋವಿನ ಸಂವೇದನೆ ಮಡುಗಟ್ಟಿದೆ. ಬಹುಶಃ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಲು ಸಾಧ್ಯವಾಗದೆ ಸೋತ, ಹೆಣ್ಣಿನ ಕೊನೆಯ ದಾರಿ ಸಾವು ಎನ್ನುವಂತೆ ಈ ಕಥೆ ಚಿತ್ರಿತವಾಗಿದೆ.

**ಸಾಂಸ್ಕೃತಿಕ ವಿನ್ಯಾಸ**

ಇಲ್ಲಿನ ಕಥೆಗಳಲ್ಲಿ ಹೆಚ್ಚು ನಗರ ಮತ್ತು ಎರಡು ಕಥೆಗಳಲ್ಲಿ ಗ್ರಾಮೀಣ ಸಂಸ್ಕೃತಿಯ ಚಿತ್ರಣಗಳು ಮೂಡಿಬಂದಿವೆ. ಸಹಜವಾಗಿ ನಗರ ಸಂಸ್ಕೃತಿಯಲ್ಲಿನ ಹೆಣ್ಣು ಗಂಡುಗಳು ಆಧುನಿಕ ಬದುಕನ್ನು ಮೈಗೂಡಿಸಿಕೊಳ್ಳುತ್ತಿರುವವರು. ಇಲ್ಲಿ ಮೋಸ ವಂಚನೆ ಸೋಗಲಾಡಿತನಗಳಿವೆ. ಆದರೆ ಹಳ್ಳಿಯ ಜನರಲ್ಲಿ ಮುಗ್ಧತನ, ಸರಳತೆ, ನಿಜವಾದ ಪ್ರೀತಿಗಳಿವೆ.

ಸಂಧ್ಯಾರೆಡ್ಡಿಯವರ ಕಥೆಗಳಲ್ಲಿ ಹಳೆತಲೆಮಾರು ಮತ್ತು ಹೊಸತಲೆಮಾರಿನ ನಡುವಿನ ಸಾಂಸ್ಕೃತಿಕ ಘರ್ಷಣೆ, ಹಾಗು ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳ ಘರ್ಷಣೆಯನ್ನು ಗುರುತಿಸಬಹುದು. ವಿದ್ಯಾವಂತ ಅವಿವಾಹಿತ ಹೆಣ್ಣಿನ ಸಾಂಸ್ಕೃತಿಕ ಸಂವೇದನೆ "ಅಮ್ಮನಿಗೊಂದು ಸೀರೆ" ಕಥೆಯಲ್ಲಿ ರಾಜಣ್ಣ ಅವನ ಹೆಂಡತಿ ಉಮೆ ಮತ್ತು ಮಗಳು ನಗರದ ಆಧುನಿಕ ಬದುಕಿಗೆ ಒಗ್ಗಿಕೊಂಡಿರುತ್ತಾರೆ. ಮೊದಲು ವಾರ ವಾರ ಊರಿಗೆ ಭೇಟಿಕೊಡುತ್ತಿದ್ದ. ಆದರೆ ರಾಜಣ್ಣ ಮದುವೆಯಾಗಿ ಮಗಳು ಹುಟ್ಟಿದ ನಂತರ ಊರಿಗೆ ಹೋಗುವುದು ತುಂಬಾ ಕಡಿಮೆಯಾಗುತ್ತದೆ. ಇದಕ್ಕೆ ರಾಜಣ್ಣ, ಉಮಾ ಮತ್ತು ಮಗಳು ಚಿತ್ರಾಳಿಗೆ ಒಟ್ಟಿಗೆ ಸಿಗುತ್ತಿದ್ದ ರಜೆಗಳು ಕಡಿಮೆ. ಹಾಗಾಗಿ ಅಂತು ನಗರ ಬದುಕಿಗೆ ಒಗ್ಗಿಕೊಂಡ ನಂತರ ಒಂದು ದಿನ ರಾಜಣ್ಣ ತನ್ನ ಹಳ್ಳಿಗೆ ಹೋಗುತ್ತಾನೆ. ಆಗಿನ ಸಂದರ್ಭದಲ್ಲಿ ರಾಜಣ್ಣನ ಸ್ವಗತದಲ್ಲಿ ಉಮೆಯ ಉಡುಗೆ ತೊಡುಗೆಯ ಕಾಳಜಿ ಹೀಗೆ ಮೂಡಿಬಂದಿದೆ. "ಉಮಾಗೆ ಉಡುಗೆ–ತೊಡುಗೆಗಳ ಬಗ್ಗೆ ವಿಪರೀತ ಕಾಳಜಿ. ಇಂಥ ಸಂದರ್ಭಕ್ಕೆ ಇಂಥ ಸೀರೆಯೇ ಆಗಬೇಕು. ಒಂದು ನಿರಿಗೆಯೂ ಕೊಂಕಬಾರದು. ಎಲ್ಲಿಗಾದರೂ ಹೊರಟರೆ ಅವಳಿಗೆ ಎದುರಾಗವ ಸಮಸ್ಯೆ ಒಂದೇ.... 'ಯಾವ ಸೀರೆ ಉಡಲಿ' ಎಂಬುದು. ಸೀರೆ ಟ್ರಾನ್ಸ್‌ಪರೆಂಟ್ ಇರಬಾರದು, ಡಾಳಾಗಿರಬಾರದು, ಜರಿ ಇರಬಾರದು. ತುಂಬಾ ಸರಿಯಾದ ಮ್ಯಾಚಿಂಗ್ ಬ್ಲೌಸ್ ಇರಬೇಕು. ಹೀಗಾಗಿ ಎಲ್ಲವೂ ಸರಿಯಾದಂಥ ಸೀರೆ ಅವಳಿಗೆ ಸಿಗುವುದೇ ಇಲ್ಲ."[9] ಇದು ನಗರಗಳಲ್ಲಿನ ಆಧುನಿಕ ಬದುಕನ್ನು ಮೈಗೂಡಿಸಿಕೊಂಡ ಸಂಸ್ಕೃತಿಯಾದರೆ, ಹಳ್ಳಿಯಲ್ಲಿರುವ ತಾಯಿ, ತಂದೆ, ವಿಧವೆ ಅತ್ತಿಗೆ, ಅಣ್ಣನ ಮಗಳು ಸರಸಾ ಸರಳ ಬದುಕನ್ನು ನಡೆಸುತ್ತಾ ಇರುವುದರಲ್ಲಿಯೇ ನೆಮ್ಮದಿಯಾಗಿದ್ದಾರೆ. ಹಳ್ಳಿಯಲ್ಲಿ ಸಿಗುವ ದಿನಸಿ ಸಾಮಾನುಗಳು ಹೂವು, ತರಕಾರಿ ಎಲ್ಲವನ್ನು ರಾಜಣ್ಣನಿಗೆ ಕೊಟ್ಟು ಮತ್ತೇನಾದರೂ ಬೇಕಾದರೆ ಕೇಳು ಎಂದು ಉಮೆಗೆ ಹೇಳುತ್ತಾರೆ. ಹೊರಡುವ ಸಂದರ್ಭದಲ್ಲಿ ರಾಜಣ್ಣ ತನ್ನ ತಂದೆ, ತಾಯಿಗೆ ಖರ್ಚಿಗೆ ದುಡ್ಡು ಕೊಡುತ್ತಾನೆ. ಆಗ ರಾಜಣ್ಣನ ತಾಯಿ "ಬೇಡಪ್ಪಾ, ಇದನ್ನು ನೀನೆ ಇಟ್ಟುಕೊಂಡಿರು" ಎನ್ನುತ್ತಾ ಹಾಸಿಗೆಯ ಪಕ್ಕದಲ್ಲಿದ್ದ ಎಲೆ ಅಡಿಕೆ ಚೀಲ ತಗೊಂಡು, ಮಾಸಿ ಮೆತ್ತಗಾಗಿ ಹೋಗಿದ್ದ ಐದು ಹತ್ತರ ನೋಟುಗಳನ್ನು ಒಂದೊಂದಾಗಿ ತೆಗೆದು ರಾಜಣ್ಣನ ಕೈಯಲ್ಲಿಡುತ್ತಿದ್ದಂತೆ ರಾಜಣ್ಣ ಗಾಬರಿಯಾಗಿಬಿಟ್ಟ. "ಏನಮ್ಮಾ, ಇದು ಎಲ್ಲಿಯದು ಇಷ್ಟೊಂದು ರೂಪಾಯಿ?" ಎಂದು ಚಕಿತನಾಗಿ ಕೇಳಿದ. "ನನಗಿನ್ಯಾರು ಕೊಡ್ತಾರೊ... ನೀನೆ ಕೊಟ್ಟಿದ್ದು.... ಇದಕ್ಕೆ ಒಂದು ಸೀರೆ ತಂದುಕೊಡು.... ನೋಡು, ಇರೋ ಸೀರೆ ಎಲ್ಲನೂ ತೂತಾಗಿದ್ದಾವೆ. ಇದಂತೂ ಹೊಲಿಯಕ್ಕೂ ಬರಲ್ಲ ಅಂದ್ಲು ಸರಸಾ"[10] ಎಂಬ ಮಾತುಗಳಿಂದ ಉಮಾಗೆ ನಾಚಿಕೆಯಾಗುತ್ತದೆ. ರಾಜಣ್ಣನ ತಾಯಿಯ ಮಾತುಗಳಲ್ಲಿ ಸಜ್ಜನಿಕೆ, ಸರಳತೆ, ನಿರ್ಮಲವಾದ ಪ್ರೀತಿಯ ನೇರ ನಡೆಯ ನುಡಿ ಕಂಡುಬರುತ್ತದೆ. ಉಮೆಯ ನಗರದ ಬದುಕಿನಲ್ಲಿ ತೋರ್ಪಡಿಕೆ, ಸುಳ್ಳುಗಳಿದೆ. ಹಾಗೂ ತಂದೆಯ ಮಾತುಗಳಲ್ಲಿ ರೈತನ ಕಷ್ಟ, ಅಸಹಾಯಕತೆ ಹಾಗು ಮುಂದೆ ರೈತರ ಹಳ್ಳಿಯ ಬದುಕು ಕಷ್ಟವಾಗುತ್ತದೆಂಬ ವಿಚಾರಗಳು ವ್ಯಕ್ತವಾಗಿದೆ.

"ಹೀಗೆ ಒಂದು ಪ್ರೇಮದ ಕಥೆ"ಯಲ್ಲಿ ಹೆಣ್ಣಿನ ತಂದೆಗೆ ಆದಷ್ಟು ಬೇಗ ಒಳ್ಳೆ ವರನನ್ನು ನೋಡಿ ತಮ್ಮ ಮಗಳ ಮದುವೆ ಮುಗಿಸ ಬೇಕು ಎನ್ನುವ ಆಸೆ ಇರುತ್ತದೆ. ಹುಡುಗನ ಸಂಬಂಧಿಕರೆಲ್ಲಾ ಆಗಾಗ ವಧು ಪರೀಕ್ಷೆ ಮಾಡಿ, ತಿಂಡಿ ಉಪಚಾರಗಳಿಂದ ಸತ್ಕರಿಸಿ ಕಳುಹಿಸಿದರೂ ಮರು ಉತ್ತರ ಬರಲು ಆರು ತಿಂಗಳುಗಳೇ ಕಳೆದಿರುತ್ತಿತ್ತು. ಆದು ಬೇಡವೆಂದು ಕೊಡುತ್ತಿದ್ದ ಕಾರಣಗಳು ಹೀಗೆ ಸಂಕಥನಗೊಂಡಿವೆ. "ಹೆಣ್ಣು ನೋಡಲು ಬರುವಾಗ ಬೆಕ್ಕು ಅಡ್ಡ ಬಂತಂತೆ, ಹುಡುಗಿ ಬಂದ ಕೊಡಲೇ ಕರೆಂಟ್ ಹೋಯಿತಂತೆ, ಹುಡುಗಿ ಹುಡುಗನಿಗಿಂತ ತುಸು ದಪ್ಪ, ಅವಳ ಕಾಲ ಬೆರಳಿನ ಲಕ್ಷಣ ಅಜ್ಜನಿಗೆ ಹಿಡಿಸಲಿಲ್ಲವಂತೆ, ಅತ್ತಿಗೆಗೆ ಮನೆಯವರ ಮಾತುಕತೆಯ ರೀತಿ ಸರಿಬರಲಿಲ್ಲವಂತೆ ಇತ್ಯಾದಿ.... ಇತ್ಯಾದಿ. ಈ ಉತ್ತರಗಳಿಂದ ನನಗೆ ಏನೇನೂ ನಿರಾಸೆಯಾಗುತ್ತಿರಲಿಲ್ಲ. ಶನಿವಾರ ಸಂಜೆ ಇವರುಗಳು ನನ್ನನ್ನು ನೋಡಲು ಬರದಿದ್ದರೆ ಸಾಕು ಎಂದಷ್ಟೇ ನಾನು ಹಾರೈಸುತ್ತಿದ್ದೆ."[11] ಹೀಗೆ ಅಪಶಕುನಗಳ ನೆವ ಒಡ್ಡಿ ಹೆಣ್ಣನ್ನು ನಿರಾಕರಿಸುವುದು ಸಂಪ್ರಾದಾಯಿಕವಾದ ವಿಚಾರವಾಗಿದೆ. ಅದನ್ನು ವಿರೋಧಿಸುವ ಮನಸ್ಥಿತಿ ಇಲ್ಲಿ ವ್ಯಕ್ತವಾಗಿದೆ. ವಿದ್ಯೆ

ತಿಳಿವಳಿಕೆಯನ್ನು ಬೆಳೆಸುತ್ತದೆ. ಹಾಗೂ ಬದುಕಿನ ಅನುಭವಗಳನ್ನು ಕುರಿತು ಬೌದ್ಧಿಕವಾಗಿ, ಮಾನಸಿಕವಾಗಿ ವಿಶ್ಲೇಷಣೆ ಮಾಡುವ ಗುಣವನ್ನು ಸಹ ಬೆಳೆಸುತ್ತದೆ. ವಧು ಪರೀಕ್ಷೆಯ ಸಂಪ್ರದಾಯ ಅದಕ್ಕೆ ಆಧುನಿಕ ಹೆಣ್ಣಿನ ಸ್ಪಂದನೆ ಇಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ.

**ಸಂಧ್ಯಾರೆಡ್ಡಿಯವರ ಕಥಾ ಶೈಲಿಯ ವಿನ್ಯಾಸ**

ಸಂಧ್ಯಾರೆಡ್ಡಿಯವರ ಕಥಾಶೈಲಿ ಬಹುತೇಕ ಸ್ತ್ರೀಕಥೆಗಾರ್ತಿಯರ ಶೈಲಿಯಂತೆ ಸ್ವಗತದಲ್ಲಿದೆ. ಜೊತೆಗೆ ಯಾರನ್ನು ದ್ವೇಶಿಸದ, ಆಕ್ರೋಶ, ಆವೇಶಗಳಿಲ್ಲದ ಸೌಮ್ಯತೆಯಿಂದ ಕೂಡಿದ ಆತ್ಮೀಯತೆಯ ಶೈಲಿಯನ್ನು ಇಲ್ಲಿ ಗುರುತಿಸಬಹುದು. ಇದಕ್ಕೆ ಕಥೆಗಾರ್ತಿ ಬೆಳೆದು ಬಂದ ಪರಿಸರವೇ ಕಾರಣ. "ನಾನಿದ್ದ ಪರಿಸರದಲ್ಲಿ ಮಕ್ಕಳ ಅರಿವಿಗೆ ಬರುವಂಥ ಆರ್ಥಿಕ ಅಸಮಾನತೆಯಾಗಲೀ, ಪುರುಷ ಪ್ರಾಧಾನ್ಯತೆಯಾಗಲೀ, ಸ್ವಭಾವದಲೇ ಇರುವಂತಹ ಕ್ರೌಯ9 ಹಿಂಸೆಗಳಾಗಲೀ ಕಾಣಲೇ ಇಲ್ಲ. ಯಾವ ಗಂಡನೂ ತನ್ನ ಹೆಂಡತಿಯನ್ನು ಹೊಡೆದ ಒಂದೇ ಒಂದು ಉದಾಹರಣೆಯು ಇರಲಿಲ್ಲ."[12] ಇಲ್ಲಿನ ಕಥೆಗಳಲ್ಲಿ ಶೋಷಣೆ, ಬಂಡಾಯದ ಅಂಶಗಳಿಲ್ಲ. ಹಾಗೆಯೇ ಕಥೆಗಳನ್ನು ಆಸಕ್ತಿಯಿಂದ ಓದಿಸಿಕೊಂಡು ಹೋಗುವ ಗುಣವಿದೆ. "ಅಜ್ಜಿಯ ಮನೆಯ ಸುತ್ತಮುತ್ತ ಒಂದೆರಡು ಬ್ರಾಹ್ಮಣರ ಮನೆಗಳೂ, ಮುಸ್ಲಿಂರ ಮನೆಗಳು, ದಲಿತರ ಮನೆಗಳು ಇದ್ದವು. ಸಂಜೆಯಾದರೆ ಸಾಕು, ಈ ಎಲ್ಲ ಮನೆಗಳವರೂ ಅವರವರ ವಯೋಮಾನದ ಹೆಂಗಳೆಯರೊಂದಿಗೆ ಗುಂಪುಗೂಡಿಕೊಂಡು ರಾತ್ರಿ ಊಟದ ಹೊತ್ತಿನ ತನಕವೂ ಹರಟೆ ಹೊಡೆಯುತ್ತ ಕೂತಿರುತ್ತಿದ್ದರು. ನಾವು ಮಕ್ಕಳು, ಸಗಣಿ ಸಾರಿಸಿದ ದೊಡ್ಡ ಅಂಗಳದಲ್ಲಿ ಚಾಪೆಗಳನ್ನು ಹಾಸಿಕೊಂಡು ತಾತ ಹೇಳುವ ಅನುಭವ ಕಥಾನಕಗಳನ್ನು ಕೇಳುತ್ತಾ ಕೂರುತ್ತಿದ್ದೆವು."[13] ಅವಿಭಕ್ತ ಕುಟುಂಬದ ವಾತಾವರಣ, ಅಜ್ಜಿಯ ಪ್ರಭಾವಗಳಿಂದ ಪ್ರೇರಿತರಾಗಿರುವುದನ್ನು ಸಂಧ್ಯಾರೆಡ್ಡಿಯವರೇ ಸ್ವತಃ ಹೇಳಿಕೊಂಡಿದ್ದಾರೆ.

ಹೀಗೆ ಸಂಧ್ಯಾರೆಡ್ಡಿಯವರ ಬೇರೊಂದು ದಾರಿ ಕಥಾ ಸಂಕಲನದಲ್ಲಿ ವಿದ್ಯಾವಂತ ಮತ್ತು ಉದ್ಯೋಗಸ್ಥ ಸ್ತ್ರೀಯರ ವಿಭಿನ್ನ ಆಲೋಚನೆಗಳನ್ನು, ಆಯ್ಕೆ ಮಾಡಿಕೊಳ್ಳಲು ಇಚ್ಛಿಸುವ ದಾರಿಗಳನ್ನು ಚಿತ್ರಿಸಿದ್ದಾರೆ. ಇದು ಹೊಸ ಜೀವನದ ಆಕರ್ಷಣೆ, ಹೊಸ ಬದುಕಿನ ನೆಮ್ಮದಿ, ಸುಖಗಳ ಹಂಬಲಗಳ ಸಂವೇದನೆ ಪಾತ್ರಗಳಲ್ಲಿ ನಿರೂಪಿತವಾಗಿದೆ. ನಗರ ಮತ್ತು ಹಳ್ಳಿಯ ಕಥಾನಕಗಳ ಚಿತ್ರಣಕ್ಕೆ ಹೊಸ ಶೈಲಿಯ ಬದುಕು ಪ್ರೇರಣೆಯಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

**ಪರಾಮರ್ಶನ ಗ್ರಂಥಗಳು**

1. ಸಂಧ್ಯಾರೆಡ್ಡಿ ಕೆ.ಆರ್, ಬೇರೊಂದು ದಾರಿ, ನೆಲಮನೆ ಪ್ರಕಾಶನ, ಕೆ.ಜಿ.ಕೊಪ್ಪಲು, ಮೈಸೂರು. ಕೃತಿ ಬಗ್ಗೆ.....(ಮುನ್ನುಡಿ ಮೋಹನ ನಾಗಮ್ಮನವರ), 1998.
2. ಡಾ.ಕರೀಗೌಡ ಬೀಚನಹಳ್ಳಿ, ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಮುನ್ನುಡಿ (ಎರಡನೆ ಮುದ್ರಣ)
3. ಸಂಧ್ಯಾರೆಡ್ಡಿ ಕೆ.ಆರ್, ಬೇರೊಂದು ದಾರಿ, ನೆಲಮನೆ ಪ್ರಕಾಶನ, ಕೆ.ಜಿ.ಕೊಪ್ಪಲು, 2010. ಮೈಸೂರು, 1998, ಪುಟ 91
4. ಸಂಧ್ಯಾರೆಡ್ಡಿ ಕೆ.ಆರ್, ಬೇರೊಂದು ದಾರಿ, ನೆಲಮನೆ ಪ್ರಕಾಶನ, ಕೆ.ಜಿ.ಕೊಪ್ಪಲು, ಮೈಸೂರು, 1998, ಪುಟ 93
5. ಅದೇ ಪುಟ 3
6. ಅದೇ ಪುಟ 56
7. ಅದೇ ಪುಟ 78
8. ಅದೇ ಪುಟ 78
9. ಅದೇ ಪುಟ 20
10. ಅದೇ ಪುಟ 28
11. ಅದೇ ಪುಟ 4
12. ಸಂ.ನಾಗಮಣಿ, ಎಸ್.ರಾವ್ ಲೇಖ–ಲೋಕ 2, ಕನಾ9ಟಕ ಲೇಖಕಿಯರ ಸಂಘ, ಚಾಮರಾಜಪೇಟೆ, ಬೆಂಗಳೂರು, 1999, ಪುಟ 115.
13. ಅದೇ ಪುಟ 115.